ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1274-2024
ಚಾ.ಸ. 8
ಪ್ರಾ.ಸ. 7

ಸಾಕ್ಷಿದಾರರ ಹೆಸರು - ಮೋಹನ
ತಂದೆಯ ಹೆಸರು - ಸುಬ್ಬಣ್ಣ ನಾಯ್ಕ
ವಯಸ್ಸು - .36 ವರ್ಷ
ಉದ್ಯೋಗ - ಕೂಲಿ
ವಾಸಸ್ಥಳ - ಮಂದಾರ್ತಿ

**ದಿನಾಂಕಃ 30.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸ. ಅಭಿಯೋಜಕರಿಂದಃ**

ದಿಃ 01-10-2021 ರಂದು ಚಾಸಾ 3 ರವರು ಚಾಸಾ 7 ರವರಿಗೆ ಫೋನ್ ಮಾಡಿ ಕೆಲಸಕ್ಕೆ ಬರುವಂತೆ ಕರೆದ ಮೇರೆಗೆ ಚಾಸಾ 7 ರವರು ನನ್ನನ್ನು ಕರೆದುಕೊಂಡು ಕೆಲಸಕ್ಕೆ ಹೋಗಿರುತ್ತಾರೆ. ಆದ್ದರಿಂದ ನಾವು ದಿಃ 02-10-2021 ರಂದು ನಾನು ಹಾಗೂ ಚಾಸಾ 7 ರವರು ಕೆಲಸಕ್ಕೆ ಹೋದಾಗ ಬೇರೆ ಜನರು ಸಹ ಅಲ್ಲಿ ಇದ್ದರು. ನಾವೆಲ್ಲರೂ ಸೇರಿ ಕೆಲಸ ಮಾಡುತ್ತಿರುವಾಗ ಹರೀಶ್ ರವರು ನೀರು ಬಿಟ್ಟಿರುತ್ತಾರೆ. ಆಗ ಹರೀಶ್ ರವರು ನಮಗೆ ಕೆಲಸ ಮಾಡಲು ಬಿಡಲಿಲ್ಲ, ಸದರಿ ವ್ಯಕ್ತಿ ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯಾಗಿರುತ್ತಾರೆ. ನಂತರ ನಾವು ಕೆಲಸ ನಿಲ್ಲಿಸಿ ಹೋಗಿರುತ್ತೇವೆ. 1, 2 ಮತ್ತು 4 ನೇ ಆರೋಪಿತರು ನಮಗೆ ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಪೋಲಿಸರು ನಮ್ಮನ್ನು ವಿಚಾರಣೆ ಮಾಡಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ನೀಡಲಾಗಿದೆ.)

**ಪಾಟೀ ಸವಾಲುಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

1 ರಿಂದ 4 ನೇ ಆರೋಪಿತರು ನಮ್ಮನ್ನು ಕೆಲಸ ಮಾಡದಂತೆ ತಡೆದರು ಎಂದರೆ ಸರಿ. ಎಲ್ಲಾ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದರು ಎಂದರೆ ಸರಿ. 3 ನೇ ಆರೋಪಿಯ ಹೆಸರು ಹರೀಶ ಅಲ್ಲ ರಾಮಚಂದ್ರ ಎಂದರೆ ಸಾಕ್ಷಿಯು ನನಗೆ ಹೆಸರು ಗೊತ್ತಿಲ್ಲ ಮತ್ತು ಪರಿಚಯ ಇಲ್ಲ ಎಂದು ತಿಳಿಸಿರುತ್ತಾರೆ. ಹರೀಶ ಎನ್ನುವ ವ್ಯಕ್ತಿ ನಮ್ಮ ಜೊತೆ ಕೆಲಸ ಮಾಡುತ್ತಿದ್ದ ಎಂದರೆ ಸಾಕ್ಷಿ ಆ ದಿನ ಬಂದಿರಲಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಹರೀಶ ನಮ್ಮ ಊರಿನವನು. ಹರೀಶ ಕೊರಂಗ್ರಪಾಡಿಯವರು ಎಂದರೆ ಸರಿಯಲ್ಲ. ಹರೀಶ ಕೂಡಾ ಆ ದಿನ ಸ್ಥಳದಲ್ಲಿದ್ದು, ಅವರೇ ಆ ದಿನ ಮಲ್ಪೆ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

ನನ್ನನ್ನು ಯಾವ ಪೋಲಿಸಿನವರು ಕರೆಸಿದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಎಲ್ಲಿ ಕೆಲಸಕ್ಕೆ ಹೋಗಿದ್ದೆ ಎಂದು ಗೊತ್ತಿಲ್ಲ ಎಂದರೆ ಸರಿ. ಅಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ., ಮತ್ತು ಸಿ.ಜೆ.ಎಂ., ಉಡುಪಿ.